ಶಾಸನ ರಚನಾ ಕಾರ್ಯಕಲಾಪಗಳು

೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಂಗಳ (ತಿದ್ದುಪಡಿ) ವಿಧೇಯಕ

(ಪರ್ಯಾಲೋಚನಾ ಪ್ರಸ್ತಾವ)

(ಮುಂದುವರೆದ ಚರ್ಚೆ)

ಶ್ರೀ ಎಂ. ಚಂದ್ರಶೇಖರ್ (ವಿದ್ಯಾಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿ, ಚರ್ಚೆಯಾಗುತ್ತಿತ್ತು, ಮಧ್ಯದಲ್ಲಿ ಒಂದೂ ವಿಷಯ ಬಂತು. ವೈಸ್ ಚಾನ್ಸಲರುಗಳು, ಪ್ರೊಫೆಸರುಗಳು ಹಾಗೂ ರೀಡರುಗಳು ಇಲ್ಲದೇ ಇರತಕ್ಕ ಸಮಯದಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡುವಾಗ ನಾನಾ ಕಾರಣಗಳಿಂದ ಸರಿಯಾಗಿ ನೇಮಕಾತಿ ಆಗುವುದಿಲ್ಲ. ಆದ್ದರಿಂದ ಅಲ್ಲಿ ಒಂದು ಪರತ್ತು ಹಾಕಬೇಕಾಗುತ್ತದೆ ಹಾಗೂ ಸೀನಿಯಾರಿಟಿಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಡಾ. ತಿಮ್ಮೇಗೌಡರು ಹಾಗೂ ಮತ್ತಿತರ ಸದಸ್ಯರು ಈ ಬಗ್ಗೆ ಹೇಳಿದ್ದು ಉಂಟು ಇದರ ಬಗ್ಗೆ ಅವತ್ತೇ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದ. ಹಾಗೆಯೇ ಮಾನ್ಯ ಸದಸ್ಯರ ಸಲಹೆಗಳನ್ನು ಒಪ್ಪಿಕೊಂಡು ಈಗ ತಿದ್ದುಪಡಿಯನ್ನು ತಂದಿದ್ದೇವೆ. ಈ ತಿದ್ದುಪಡಿ ತಂದಮೇಲೆ ಯಾವುದೇ ವಿರೋಧ ಇರಬಾರದು ಎಂದು ಹೇಳುತ್ತೇನೆ. ಎರಡನೆಯದು ಇದರಲ್ಲಿ ಸೆಕ್ಷನ್ ೨೧ಕ್ಕೆ ಒಂದು ತಿದ್ದುಪಡಿಯನ್ನು ತರುತ್ತಾ ಇದ್ದೇವೆ. ಸೆಕ್ಷನ್ ೨೧ರಲ್ಲಿ ಎಂದರೆ ಸೆನೆಟ್‌ಗೆ ನೇಮಕಾತಿ ಮಾಡುವಾಗ, ಹಿಂದಿನ ಕಾಯಿದೆ ಪ್ರಕಾರ

> 'One Professor or Director in the Post-Graduates from each of the faculties, elected by Professors and Directors in Post-Graduate Departments of that faculty'...

ಹೆಚ್ಚಿಗೆ ಪ್ರೊಫೆಸರುಗಳು, ಡೈರೆಕ್ಟರುಗಳು ಇದ್ದರೆ, ಒಬ್ಬರನ್ನು ಚುನಾಯಿಸಿ ಮಾಡುವುದು ಎಂದು ಅವಕಾಶ ಇದೆ. ಆದರೆ ಕೆಲವಾರು ಡಿಪಾರ್ಟ್‌ಮೆಂಟ್‌ಗಳಲ್ಲಿ ಕೇವಲ ಇಬ್ಬರು ಇದ್ದಾಗ ಆದಕ್ಕೆ ಚುನಾವಣೆ ಮಾಡಬೇಕಾದ್ದು ಇಲ್ಲ. ಈ ಎರಡೂ ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇವೆ. ಇದಕ್ಕೆ ಸಭೆಯು ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ತಿದ್ದುಪಡಿ ಬಗ್ಗೆ ಹೋದಸಲವೇ ನಾವು ಅಬ್ಜೆಕ್ಷನ್ ರೈಸ್ ಮಾಡಿದ್ದೆವು. ಈಗ ಅವರೇ ಆಫಿಷಿಯಲ್ ಅಮೆಂಡ್‌ಮೆಂಟ್ ಮೂವ್ ಮಾಡಿರುತ್ತಾರೆ. ಎರಡನೆಯದು, the words 'seniority' shall be inserted among Teachers, Lecturers...
ಎಂದರೆ ರೀಡರ್ಸ್ ಬರುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್.—ರೀಡರ್ಸ್ ಆದಮೇಲೆ ನೆಕ್ಸ್ಟ್ ಲೆಕ್ಚರರ್ಸ್ ಬರುತ್ತಾರೆ. ಕೆಲವು ಇಲಾಖೆಗಳಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ಸ್ ಎಂದು ಇರುತ್ತಾರೆ. ಟೀಚರ್ಸ್ ಎಂಬ ಅರ್ಥದಲ್ಲಿ ಅವರೆಲ್ಲಾ ಬರುವ ರೀತಿಯಲ್ಲಿ ಮಾಡಿದ್ದೇವೆ. ಯಾರೇ ಬರಲಿ ಸೀನಿಯಾರಿಟಿ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಿರತಕ್ಕಂಥ ನಿಮ್ಮ ಡೆಫಿನಿಷನ್ ಪ್ರಕಾರ 'teacher' include 'instructor' ಎಂದು ಇದೆ.

ಶ್ರೀ ಎಂ. ಚಂದ್ರಶೇಖರ್.—ಇರಬಹುದು. ಇದುವರೆಗೆ ಯಾವ ವಿಷಯದಲ್ಲೂ ಈ ಮಟ್ಟಕ್ಕೆ ಹೋಗಿಲ್ಲ. ಲೆಕ್ಚರರ್ಸ್ ಮಟ್ಟಕ್ಕೇ ಬಂದಿಲ್ಲ. ಹೊಸ ವಿಶ್ವವಿದ್ಯಾನಿಲಯಗಳಿಗೆ ಈ ಒಂದು ಪ್ರಾವಿಜನ್ ಮಾಡಿರುತ್ತೇವೆ. ಅಲ್ಲಿ ಲೆಕ್ಚರರ್ಸ್ ಎಂದು ಇದ್ದೇ ಇರುತ್ತಾರೆ. ಆ ಮಟ್ಟಕ್ಕೆ ಇದು ನಿಂತು ಹೋಗುತ್ತದೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ನೀವು ನಿಮ್ಮ ಅಮೆಂಡ್‌ಮೆಂಟ್ ಪ್ರೆಸ್ ಮಾಡುವುದಿಲ್ಲ ಅಲ್ಲವೇ .

ಶ್ರೀ ಬಿ. ಬಸವಲಿಂಗಪ್ಪ.—ಮಾಡುತ್ತೇನೆ.

ಅಧ್ಯಕ್ಷರು,—ಹಾಗಾದರೆ ತಿದ್ದುಪಡಿಯನ್ನು ಮಂಡಿಸಬಹುದು.

Amendment to Clause 2

SRI B BASAVALINGAPPA.—Sir I move the following amendment to the Karnataka State Universities (Amendment) Bill, 1988.

That in Clause 2

'Second proviso to Section 17 be deleted'.

(*The amendment was Proposed*)

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಇದರಲ್ಲಿ proviso to clause-2 says,

"Provided further that where no person in any Department of Studies is available to act as the Dean of the Faculty or where the University does not have a Department of Studies for any Faculty, such Prosessor or Senior-most Reader or Teacher in a Department of Studies of an affiliated College as may be nominated by the Vice-Chancellor to act as the Dean of the Faculty"..

ಇದರ ಅವಶ್ಯಕತೆ ಇದೆಯೋ ಇಲ್ಲವೇ ಎಂಬುದು ನನ್ನ ಪ್ರಶ್ನೆ ನನ್ನ ಒಂದು ದೃಷ್ಟಿಯಲ್ಲಿ ಇದರ ಅವಶ್ಯಕತೆ ಇಲ್ಲವೇ ಇಲ್ಲ. ಕಾರಣ ಏನೆಂದು ಹೇಳಿದರೆ ಡಿಪಾರ್ಟ್‌ಮೆಂಟ್ ಇಲ್ಲ, ಫ್ಯಾಡೀಸ್ ಇಲ್ಲ. ಯಾವುದಾದರೂ ಒಂದು ಅಫಿಲಿಯೇಟ್ ಕಾಲೇಜ್‌ನಲ್ಲಿ ಇವು ಇಲ್ಲವೇ ಇಲ್ಲ. ಡಿಪಾರ್ಟ್‌ಮೆಂಟ್ ಆಫ್ ಸ್ಟಡೀಸ್, ಫ್ಯಾಕಲ್ಟೀಸ್, ಕಾಲೇಜ್‌ನಲ್ಲೂ ಇಲ್ಲ ಯೂನಿವರ್ಸಿಟಿಯಲ್ಲೂ ಇಲ್ಲ ಎಂದು ಇಟ್ಟು ಕೊಳ್ಳೋಣ. ಆದಕ್ಕೆ ಏತಕ್ಕೆ ನೀವು ಅನಾವಶ್ಯಕವಾಗಿ ಮುಂದಾಲೋಚನೆ ಮಾಡಿ ಇಂತಹ ಒಂದಾ ನೂ ನತೆಗಳಿಗೆ ಅವಕಾಶ ಮಾಡಿಕೊಡತಕ್ಕಂಥ ಪ್ರಶ್ನೆ ಏತಕ್ಕೆ ಮಾಡಿರುತ್ತೀರಿ ? ಇಂತಹ ಪ್ರಶ್ನೆ ಏತಕ್ಕೆ ಬರುತ್ತದೆ ? ಇದನ್ನು ಡಿಲೀಟ್ ಮಾಡಿದರೆ, ಕಿತ್ತುಹಾಕಿದರೆ ನಿಮಗೆ ಅನಾನುಕೂಲ ಏನು ಎಂಬ ಬಗ್ಗೆ ತಾವು ವಿಚಾರ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಒಂದು ಉದಾಹರಣೆ ಕೊಡಬೇಕಾಗಿದ್ದರೆ, ಬೆಂಗಳೂರಿನ ವಿಶ್ವವಿದ್ಯಾನಿಲಯವನ್ನೇ ತೆಗೆದುಕೊಳ್ಳಿ, ಅಲ್ಲಿ ಮೆಡಿಕಲ್ ಫ್ಯಾಕಲ್ಟಿ ಇದೆ. ಆದರೆ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಇದ್ದಾಗ, ಇದರಲ್ಲಿ ಅಫಿಲಿಯೇಟೆಡ್ ಮೆಡಿಕಲ್ ಕಾಲೇಜಸ್ ಇರುತ್ತವೆ. ಈಗೇನು ಸರಕಾರಿ ಮೆಡಿಕಲ್ ಕಾಲೇಜ್ ಇದೆಯಲ್ಲಾ ಆದರಿಂದ ಇರುವಂತಹ ಪ್ರೊಫೆಸರ್ಸ್‌ನ್ನು ಒಂದು ತೂಲನಾತ್ಮಕವಾಗಿ ನೋಡಿದರೆ ಅಲ್ಲಿ ಮೆಡಿಕಲ್ ಕಾಲೇಜು ವಿಶ್ವವಿದ್ಯಾಲಯಕ್ಕೆ ಸೇರಿರುವುದಿಲ್ಲ. ಈಗ ಮೆಡಿಕಲ್ ಕಾಲೇಜ್‌ದಂ ಬಂದು ಫ್ಯಾಕಲ್ಟಿ ಬೇಕಾಗುತ್ತದೆ ಕಾರಣ ಏನೆಂದರೆ ಬೇರೆ ಅಫಿಲಿಯೇಟೆಡ್ ಕಾಲೇಜಸ್ ಇದೆ. ಆದುದರಿಂದ ಅಂತಹ ಸಮಯಗಳಲ್ಲಿ ಬೇರೆ ಕಾಲೇಜುಗಳು ಏನು ಇವೆ ಅಲ್ಲಿ ಅರ್ಹರಾದಂತ ವ್ಯಕ್ತಿಗಳು ಇರುತ್ತಾರೆ. ಅನೇಕ ಜನ ಇರುತ್ತಾರೆ. ಬೆಂಗಳೂರಿನ ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಇದೆ, ಅಂತಹ ದೊಡ್ಡ ಕಾಲೇಜುಗಳಲ್ಲಿ, ಬೇರೆ ಹೊಸದಾಗಿ ಪ್ರಾರಂಭವಾಗಿರುವುದಲ್ಲಿ ಬಹಳ ಅರ್ಹರಾದಂಥ ಪ್ರೊಫೆಸರ್ಸ್ ಇದ್ದಾಗ, ಅವರನ್ನು ಫ್ಯಾಕಲ್ಟಿಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಬಂದಾಗ, ಡೀನ್ ಮಾಡಬೇಕು ಫ್ಯಾಕಲ್ಟಿ ಆಗಬೇಕೆಂದಂ ಹೇಳಿದಾಗ ಅವರ ಸೇವೆಯನ್ನು ಪಡೆಯುವುದರಲ್ಲಿ ತೊಂದರೆಯಾಗುವುದಿಲ್ಲ. ಅವರು ಅರ್ಹತೆಗೆ ಸೀಮಿತ ಆಗಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಎಲ್ಲಾ ಕಾಲೇಜುಗಳೂ ಯೂನಿವರ್ಸಿಟಿಯಾ ಆಡಳಿತಕ್ಕೆ ಬಂದಿರುವುದಿಲ್ಲ. ಆ ಒಂದು ಇದನ್ನು ನೋಡಿಕೊಂಡು ಇದನ್ನು ಮಾಡಲಾಗಿದೆ ಅಷ್ಟೇ.

SRI B. BASAVALINGAPPA.—My difficulty is, now among all the professors of the colleges affiliated as well as Government, whether you are going to recognise the seniority all such professors.

ಶ್ರೀ ಎಂ. ಚಂದ್ರಶೇಖರ್.—ಆದಕ್ಕೂ ಅಮೆಂಡ್‌ಮೆಂಟ್ ತಂದಿದೆ, ನೆಕ್ಸ್ಟ್ ಪ್ರಾವಿಸೋ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ,—ಟೀಚರ್ಸ್ ಎಂಬುದನ್ನು ಡಿಲೀಟ್ ಮಾಡಿರುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಅದರಲ್ಲಿ ಸೀನಿಯಾರಿಟಿ ಮಾಡಿರುತ್ತೇವೆ.

MR. SPEAKER.—I think Hon. Member Sri Basavalingappa will not press the amendment now moved....

SRI B. BASAVALINGAPPA.—Yes Sir, withdraw my amendment.

MR. SPEAKER.—Is it the pleasure of the House to grant leave of the House to withdraw the Amendment

(*Motion was accepted and leave was granted to withdraw the amendments*)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಮಂಡಿಸುವುದು.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು)—ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

That in CLAUSE 2

(i) In the first proviso after the words "Vice Chancellor" the words, "inaccordance with Seniority" shall be inserted.

(ii) In the senond proviso, after the words "Vice Chancellor" the words "inacordance with Seniority shall be inserted."

(The amendment was Proposed)

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

(i) In the first proviso after the words "Vice Chancellor" the words, "inaccordance with Seniority" shall be inserted.

(ii) In the second proviso, after the words "Vice Chancellor" the words "inacordance with Seniority shall be inserted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು.—"ತಿದ್ದುಪಡಿಯಾಗಿರುವ ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತಂ ಮಂತ್ತು ತಿದ್ದುಪಡಿಯಾಗಿರುವ ಖಂಡ 2 ವಿಧೇಯಂಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು —ಪ್ರಸಾವ ಏನೆಂದರೆ ''ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ.

ಶ್ರೀ ಎಂ. ಚಂದ್ರಶೇಖರ್. —ತಿದ್ದುಪಡಿಯಾಗಿರುವ ೧೯೮೮ರ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ತಿದ್ದುಪಡಿಯಾಗಿರುವ ೧೯೮೮ರ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ವಂತ್ರ ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಒಂದೇ ಒಂದು ಸಣ್ಣ ಬಿಲ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದು ಏನು ?

ಅಧ್ಯಕ್ಷರು.—ಈಗ ಬಿ. ಎ. ಸಿ. ಯಲ್ಲಿ ಏನಾಯಿತು ಅದನ್ನು ನಾನು ಇಲ್ಲಿ ಓದಿ ಹೇಳಿದ್ದೇನೆ. ತಮಗೂ ಒಂದು ಕಾಪಿ ಕೊಟ್ಟಿದ್ದೇನೆ. ಅದರಲ್ಲಿ ಈ ಬಿಲ್ ಆದ ಮೇಲೆ ತಾವು ನಿಯಮ ೬೮ರ ಮೇರೆಗೆ ಚರ್ಚೆ ಮಾಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಇರಬಹುದು ಅಧ್ಯಕ್ಷರೇ, ತಾವು ಹೇಳಿದ್ದು ಏನು?

ಅಧ್ಯಕ್ಷರು —ಬಿ. ಎ. ಸಿ. ಕಾಪಿ ತಮಗೂ ಕಳುಹಿಸಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಇಲ್ಲದೆ ಇದ್ದಾಗ ಓದಿರಬಹುದು. ನೀವು ಏನೋ ಟೈಪ್ ಮಾಡಿ ಓದಿದರೆ ಹೇಗೆ ? ನನಗೆ ಗೊತ್ತಾಗಬೇಕಲ್ಲಾ. ನಾನು ನಿಮ್ಮ ಆಫೀಸ್‌ನವರ ಹೆಂಗೆ ಚಾರ್ಜ್ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ಬಿಲ್ ಮಂಗಿದ ತಕ್ಷಣ ನಿಯಮ ೬೮ ಅನ್ನು ತೆಗೆದುಕೊಳ್ಳೋಣ. ಹತ್ತು ನಿಮಿಷದಲ್ಲಿ ಮುಗಿಯುತ್ತದೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ನಮ್ಮ ಕೋ-ಆಪರೇಷನ್ ನಿಮಗೆ ಬೇಡವೆಂದು ಕಾಣುತ್ತದೆ.

ಅಧ್ಯಕ್ಷರು.—ನೀವು ಕೋ-ಆಪರೇಷನ್ ಕೊಡುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಈಗ ಈ ರೀತಿ ಚೇಂಜ್ ಮಾಡಿದರೆ ಹೇಗೆ ?

ಅಧ್ಯಕ್ಷರು.—ಅರಣ್ಯ ತಿದ್ದುಪಡಿ ವಿಧೇಯಕವನ್ನು ಈ ತೆಗೆದುಕೊಳ್ಳೋಣ.